

ಯಾರಿಗೂ ಅವರ ದರ್ಶನ ಭಾಗ್ಯ ಸಿಗಲಾರದು' ಎಂದು ಮುನಿಪುಂಗವರನ್ನು ತಡೆದರು.

ಕೋಪಗೊಂಡ ಸನಕ ಸನಂದಾದಿ ಮುನಿಶ್ರೇಷ್ಠರು 'ಜಗತ್ಪಾಲಕನಾದ ಮಹಾವಿಷ್ಣುವಿನ ದರ್ಶನಕ್ಕೆ ಬಂದ ನಮ್ಮನ್ನು ತಡೆಯುವ ಸಾಹಸ ಮಾಡುತ್ತಿರುವಿರಾ? ಇದೋ... ಕೊಳ್ಳಿ ಶಾಪ. ಭೂಲೋಕದಲ್ಲಿ ದುಷ್ಟರಾಗಿ ಜನಿಸಿ' ಎಂದು ಕಮಂಡಲುವಿನಿಂದ ನೀರನ್ನು ಕರದಲ್ಲಿ ಹಿಡಿದು, ಜಯ ವಿಜಯರ ಮೇಲೆ ಎರಚಿ ಶಪಿಸಿಯೇಬಿಟ್ಟರು.

'ಮಹಾಪ್ರಭೋ... ಒಳ ಪ್ರವೇಶವನ್ನು ತಡೆದ ನಮಗೆ ತಡೆಯದೇ ಶಾಪವಿತ್ತರು ಸನಕಾದಿ ಮುನಿ ಪುಂಗವರು. ಇದಕ್ಕೆ ಪರಿಹಾರವೇನು... ದೇವಾ?' ಮಹಾವಿಷ್ಣುವಿನಲ್ಲಿ ಮೊರೆ ಇಟ್ಟರು ಜಯ ವಿಜಯರು.

'ಮುನಿಶ್ರೇಷ್ಠರ ಶಾಪ ಫಲಿಸದೆ ಹೋಗದು. ಅನುಭವಿಸಲೇಬೇಕು. ಬುವಿಯಲ್ಲಿ ಜನಿಸಿ' ಎಂದ ಲಕ್ಷ್ಮೀರಮಣ.

'ಅದು ಹೇಗೆ ಸಾಧ್ಯ ದೇವರ ದೇವಾ? ನಾವು ನಿನ್ನನ್ನೂ, ಈ ವೈಕುಂಠವನ್ನೂ ತೊರೆದು ಇರಲಾರೆವು. ಹೇಗಾದರೂ ನಮ್ಮನ್ನು ನಿನ್ನ ಬಳಿಯೇ ಇರಿಸಿಕೋ ತಂದೇ' ಅಂಗಲಾಚಿ ಬೇಡಿದರು ಜಯ ವಿಜಯರು.

'ಹೇಳಿದೆನಲ್ಲಾ... ಋಷಿಮುನಿಗಳು ಕೊಟ್ಟ ಶಾಪ ಎಂದಿಗೂ ಹುಸಿಯಾಗದು. ಅವರಿತ್ತ ಶಾಪವನ್ನು ನೀವು ಅನುಭವಿಸಲೇಬೇಕು' ಎಂದ ಲಕ್ಷ್ಮೀಲೋಲ ಕ್ಷಣ ಕಾಲ ಯೋಚಿಸಿ ನುಡಿದ:

'ಭೂ ಲೋಕದಲ್ಲಿ ಮೂರು ಜನ್ಮ ತಳೆದು, ನನ್ನ ಬದ್ಧವೈರಿಗಳಾಗಿ, ನನ್ನಿಂದಲೇ ಸಂಹರಿಸಲ್ಪಟ್ಟು ಮರಳಿ ಈ ವೈಕುಂಠಕ್ಕೆ, ನನ್ನ ಸನ್ನಿಧಾನಕ್ಕೆ ಬರುತ್ತೀರೋ ಅಥವಾ ಆರು ಜನ್ಮಗಳನ್ನೆತ್ತಿ, ನನ್ನ ಭಕ್ತರಾಗಿ ಬಾಳಿ ಮರಳುತ್ತೀರೋ? ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಿ.'

'ಆರು ಜನ್ಮವೇ...? ಬೇಡ ಪ್ರಭೂ... ಅಷ್ಟು ದೀರ್ಘ ಕಾಲ ನಿಮ್ಮನ್ನೂ, ಈ ವೈಕುಂಠವನ್ನೂ ಬಿಟ್ಟು ನಾವು ಇರಲಾರೆವು. ನಿನ್ನ ವೈರಿಗಳಾದರೂ ಸರಿ, ನಿನ್ನಿಂದಲೇ ಕೊಲ್ಲಲ್ಪಡುವವರಾದರೂ